ESTD 20th June 1967 S.M.A. (TRUST)'s College Code : RCUB-4275
☎ : 08339-264653

# ಶಿವಾನಂದ ಮಹಾವಿದ್ಯಾಲಯ, ಕಾಗವಾಡ.

ಜಿ॥ ಬೆಳಗಾವಿ. (ಕಲಾ, ವಾಣಿಜ್ಯ ಮತ್ತು ವಿಜ್ಞಾನ) ಕರ್ನಾಟಕ ರಾಜ್ಯ.

# SHIVANAND COLLEGE, KAGWAD-591223.

Dist. Belagavi. (Arts, Commerce & Science) Karnataka State

Website : www.smatrustshivanandcollegekagwad.co.in E-mail : shivanandcollegekagwad@gmail.com

Re-Accredited by NAAC with "B" Grade | Affiliated to Rani Channamma University, Belagavi-591156

Ref. No. : 404/2018-19 Date : 14-11-2018

ಗೆ,
ದಿ. ಮ್ಯಾನೇಜರ್
ಭಾರತೀಯ ಸ್ಟೇಟ್ ಬ್ಯಾಂಕ್
ಶಾಖೆ, <u>ಶೇಡಬಾಳ-591315.</u>

ವಿಷಯ : ರಾಜ್ಯದಲ್ಲಿನ ಪ್ರಕೃತಿ ವಿಕೋಪ ಸಂತ್ರಸ್ಥರ ನೆರವಿಗಾಗಿ ರಾಜ್ಯ ಸರ್ಕಾರಿ ನೌಕರರ ಒಂದು ದಿನದ ಸಂಬಂಳವನ್ನು ಕಟಾವು ಮಾಡಿದ ಹಣವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ಖಾತೆ ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ-2018 ವಿಧಾನ ಸೌಧ ಶಾಖೆಯ ಖಾತೆ ಸಂಖ್ಯೆ : 37887098605, IFSC Code : SBIN0040277, MICR No : 560002419 ಕ್ಕೆ ಚೆಕ್ ಮೂಲಕ ಜಮೆ ಮಾಡುವ ಕುರಿತು.

ಉಲ್ಲೇಖ : ಸರ್ಕಾರಿ ಆದೇಶ ಸಂಖ್ಯೆ : ಆಇ/20/ಎಸ್ಆರ್‌ಪಿ/2018, ಬೆಂಗಳೂರು, ದಿನಾಂಕ : 17ನೇ ಸಪ್ಟೆಂಬರ್-2018.

ಮಾನ್ಯರೆ,

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಿತ ಸರ್ಕಾರಿ ಆದೇಶದ ಪ್ರಕಾರ ನಮ್ಮ ಮಹಾವಿದ್ಯಾಲಯದಲ್ಲಿ ಯುಜಿಸಿ ವೇತನ ಶ್ರೇಣಿ ಹಾಗೂ ರಾಜ್ಯ ವೇತನ ಶ್ರೇಣಿ ಪಡೆಯುತ್ತಿರುವ ಸರ್ಕಾರಿ ನೌಕರರ <u>ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ-2018</u>ಕ್ಕೆ <u>(ಕೊಡಗು ಮತ್ತು ಇತರ ಜಿಲ್ಲೆಗಳು)</u> ಸಪ್ಟೆಂಬರ್-2018 ತಿಂಗಳ ವೇತನದಿಂದ 1 ದಿನದ ವೇತನವನ್ನು ಕಟಾವು ಮಾಡಲಾದ ಮೊತ್ತವನ್ನು ತಮ್ಮ ಬ್ಯಾಂಕಿನಲ್ಲಿರುವ ಮಾನ್ಯ ಪ್ರಾಚಾರ್ಯರು, ಶಿವಾನಂದ ಮಹಾವಿದ್ಯಾಲಯ, ಕಾಗವಾಡ ವೇತನದ ಉಳಿತಾಯ ಖಾತೆ ಸಂಖ್ಯೆ : 00000054052071059 ಯಲ್ಲಿ ಜಮೆ ಇರುತ್ತದೆ. ಸದರಿ ಮೊತ್ತವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (SBI) ಖಾತೆ ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ-2018 ವಿಧಾನ ಸೌಧ ಶಾಖೆಯ ಖಾತೆ ಸಂಖ್ಯೆ : <u>37887098605, IFSC Code : SBIN0040277, MICR No : 560002419</u> ಕ್ಕೆ ಜಮೆ ಮಾಡುವ ಸಲುವಾಗಿ ಪ್ರಾಚಾರ್ಯರು, ಶಿವಾನಂದ ಮಹಾವಿದ್ಯಾಲಯ, ಕಾಗವಾಡ ಚೆಕ್ ಸಂಖ್ಯೆ : "458516" ಯನ್ನು ರೂ, 72,374.00 ದಿನಾಂಕ : 14/11/2018 ಯನ್ನು ಕಳಿಸುತ್ತಿದ್ದೇವೆ. ಸದರಿ ಮೊತ್ತವನ್ನು ಮೇಲೆ ನಮೂದಿಸಿದ ಖಾತೆ ಸಂಖ್ಯೆಗೆ ಜಮೆ ಮಾಡಬೇಕಾಗಿ ತಮ್ಮಲ್ಲಿ ವಿನಂತಿ.

ತಮ್ಮ ವಿಶ್ವಾಸಿ,

ಪ್ರ. ಪ್ರಾಚಾರ್ಯರು,
ಶಿವಾನಂದ ಮಹಾವಿದ್ಯಾಲಯ,
ಕಾಗವಾಡ. (ಜಿ:ಬೆಳಗಾವಿ)

ಅಡಕಗಳು : 1) ಭಾರತೀಯ ಸ್ಟೇಟ್ ಬ್ಯಾಂಕ್ ಶಾಖೆ, ಶೇಡಬಾಳ ಚೆಕ್ ಸಂಖ್ಯೆ :" 458516" ರೂ, 72,374.00 ದಿನಾಂಕ : 14/11/2018.
2) ಸರ್ಕಾರಿ ಆದೇಶದ ಝರಾಕ್ಸ ಪ್ರತಿ.

For, STATE BANK OF INDIA
BRANCH MANAGER
Shedbal Branch.

Dr. S. O. Halasagi
I/c. PRINCIPAL,
Shivanand College,
Kagwad. Dist. Belagavi.

Scanned by CamScanner

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ರಾಜ್ಯದಲ್ಲಿನ ಪ್ರಕೃತಿ ವಿಕೋಪ ಸಂತ್ರಸ್ತರ ನೆರವಿಗಾಗಿ ರಾಜ್ಯ ಸರ್ಕಾರಿ ನೌಕರರ ಒಂದು ದಿನದ ಸಂಬಳವನ್ನು ಕಟಾವು ಮಾಡುವ ಬಗ್ಗೆ.

ಪ್ರಸ್ತಾವನೆ:

ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಅತಿವೃಷ್ಟಿಯ ಕಾರಣದಿಂದಾಗಿ. ರಾಜ್ಯದಲ್ಲಿನ ಕೊಡಗು ಜಿಲ್ಲೆ ಮತ್ತು ಇತರೆ ಜಿಲ್ಲೆಗಳಲ್ಲಿನ ಪ್ರಕೃತಿ ವಿಕೋಪ ಸಂತ್ರಸ್ತರ ನೆರವಿಗಾಗಿ ರಾಜ್ಯ ಸರ್ಕಾರಿ ನೌಕರರ ಒಂದು ದಿನದ ವೇತನವನ್ನು ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿಯಲ್ಲಿ ಕಟಾವು ಮಾಡಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಸಮರ್ಪಿಸಲು ಸರ್ಕಾರಿ ನೌಕರರು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿರುವುದರಿಂದ ಈ ಕುರಿತು ಸೂಕ್ತ ಆದೇಶವನ್ನು ಹೊರಡಿಸಬೇಕೆಂದು ಸರ್ಕಾರದ ವಿವಿಧ ನೌಕರರ ಸೇವಾ ಸಂಘಟನೆಗಳು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿರುತ್ತವೆ.

ಮುಂದುವರೆದು. ರಾಜ್ಯ ಸರ್ಕಾರಿ ನೌಕರರನ್ನು ಪ್ರತಿನಿಧಿಸುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರೂ ಸಹ ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ: 23-08-2018ರ ತಮ್ಮ ಮನವಿಯಲ್ಲಿ ಇದೇ ವಿಷಯದ ಬಗ್ಗೆ ಪ್ರಸ್ತಾಪಿಸಿ. ರಾಜ್ಯಾದ್ಯಂತ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಇಲಾಖೆಗಳ ಹಾಗೂ ಎಲ್ಲಾ ವೃಂದದ ರಾಜ್ಯ ಸರ್ಕಾರಿ ನೌಕರರ ಒಂದು ದಿನದ ವೇತನವನ್ನು ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿಯಲ್ಲಿ ಕಟಾವು ಮಾಡಿ. ಪ್ರಕೃತಿ ವಿಕೋಪ ಸಂತ್ರಸ್ತರ ಪುನರ್ ವಸತಿ ಉದ್ದೇಶಕ್ಕೆ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಸಮರ್ಪಿಸಲು ಎಲ್ಲಾ ಜಿಲ್ಲಾ ಮತ್ತು ಕೇಂದ್ರ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನಿಸಲಾಗಿದ್ದು. ಈ ಬಗ್ಗೆ ಸೂಕ್ತ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ.

ರಾಜ್ಯದ ಪ್ರಕೃತಿ ವಿಕೋಪ ಸಂತ್ರಸ್ತರ ಪುನರ್ ವಸತಿ ಹಾಗೂ ಅವರ ಕಲ್ಯಾಣ ಉದ್ದೇಶಕ್ಕೆ ದೇಣಿಗೆ ನೀಡಲು ಸ್ವಯಂಪ್ರೇರಿತವಾಗಿ ಮುಂದಾಗಿರುವ ರಾಜ್ಯ ಸರ್ಕಾರಿ ನೌಕರರ ಸಂಘದ ಸದುದ್ದೇಶದ ತೀರ್ಮಾನವನ್ನು ಸರ್ಕಾರವು ಶ್ಲಾಘಿಸುತ್ತದೆ ಹಾಗೂ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಆಇ 20 ಎಸ್‌ಆರ್‌ಪಿ 2018,**
**ಬೆಂಗಳೂರು, ದಿನಾಂಕ: 17ನೇ ಸೆಪ್ಟಂಬರ್ 2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಸಂಭವಿಸಿರುವ ಪ್ರಕೃತಿ ವಿಕೋಪ ಸಂತ್ರಸ್ತರ ಹಾನಿಯನ್ನು ಪರಿಹರಿಸಲು 2018ರ ಸೆಪ್ಟಂಬರ್ ತಿಂಗಳ ಸರ್ಕಾರಿ ನೌಕರರ ಸಂಬಳದಿಂದ ಒಂದು ದಿನದ ಸಂಬಳವನ್ನು ಕಟಾವು ಮಾಡಿ ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ 2018ಗೆ ನೀಡಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಸರ್ಕಾರವು ಮಂಜೂರಾತಿ ನೀಡಿದೆ:-

(ಅ) ನೌಕರರ ಒಂದು ದಿನದ ಸಂಬಳದ ಕೊಡುಗೆಯನ್ನು (ಒಟ್ಟು ಮೊತ್ತವನ್ನು ರೂಪಾಯಿಗೆ ಸಮನಾಗಿಸಿ ಭಿನ್ನಾಂಶವನ್ನು ನಿರ್ಲಕ್ಷಿಸುವುದು) 2018ರ ಸೆಪ್ಟಂಬರ್ ತಿಂಗಳಿನ ಸಂಬಳದ ಬಿಲ್‌ನಿಂದ ಕಟಾವು ಮಾಡುವ ಮೂಲಕ ಸರ್ಕಾರಕ್ಕೆ ಜಮೆ ಮಾಡುವ ಅಧಿಕಾರವನ್ನು ಸಂಬಂಧಿಸಿದ ವೇತನ ಬಟವಾಡೆ ಮಾಡುವ ಅಧಿಕಾರಿಗಳು ಮತ್ತು ಖಜಾನೆ ಅಧಿಕಾರಿಗಳು ಪಡೆದಿರುತ್ತಾರೆ.

Dr. S. O. Halasagi
I/c. PRINCIPAL,
Shivanand College,
Kagwad. Dist. Belagavi.

Scanned by CamScanner

(ಆ) ಒಂದು ದಿನದ ಸಂಬಳವನ್ನು ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ 2018ಕ್ಕೆ ನೀಡಲು ಇಚ್ಛಿಸದ ನೌಕರರು ಸಂಬಂಧಪಟ್ಟ ವೇತನ ಬಟವಾಡೆ ಅಧಿಕಾರಿಗಳಿಗೆ ಈ ಬಗ್ಗೆ ದಿನಾಂಕ: 22-09-2018ರ ಒಳಗೆ ಲಿಖಿತ ಅಭಿಮತವನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ನೌಕರರಿಂದ ಲಿಖಿತ ಅಭಿಮತ ಸ್ವೀಕೃತವಾಗದಿದ್ದಲ್ಲಿ, ಒಂದು ದಿನದ ವೇತನವನ್ನು ಸೆಪ್ಟೆಂಬರ್ ತಿಂಗಳಿನ ಸಂಬಳದಲ್ಲಿ ಕಟಾವು ಮಾಡಲು ನೌಕರರ ಆಕ್ಷೇಪಣೆ ಇರುವುದಿಲ್ಲವೆಂದು ಭಾವಿಸಲಾಗುವುದು.

(ಇ) ಪ್ರತಿಯೊಬ್ಬ ನೌಕರನ/ಳ ಸಂಬಳದಿಂದ ಕಟಾವು ಮಾಡಿದ ವೇತನದ ಅಂಶವನ್ನು ವೇತನ ಬಿಲ್ಲಿನಲ್ಲಿ ಅವರ ಹೆಸರಿನ ಎದುರಿನಲ್ಲಿ **"8658-00-102-4-32: State Government Employees Contribution towards Flood Relief (Kodagu and other districts)"** ಲೆಕ್ಕ ಶೀರ್ಷಿಕೆಗೆ ಎಂಬ ಪ್ರತ್ಯೇಕ ಕಾಲಮ್ಮಿನಲ್ಲಿ ತೋರಿಸುವುದು ಮತ್ತು ಸಮಗ್ರ ವೇತನ ಬಿಲ್ಲಿನಲ್ಲಿ ಮುರಿದುಕೊಂಡ ಒಟ್ಟು ಮೊತ್ತವನ್ನು ವೇತನ ಬಿಲ್ಲಿನ ಮುಖಪುಟದಲ್ಲಿ **"8658-00-102-4-32: State Government Employees Contribution towards Flood Relief (Kodagu and other districts)"** ಲೆಕ್ಕ ಶೀರ್ಷಿಕೆಗೆ ಎಂದು ಸ್ಪಷ್ಟವಾಗಿ ನಮೂದಿಸಬೇಕು. ಖಜಾನೆ ಅಧಿಕಾರಿಯು ಒಟ್ಟು ಮೊತ್ತವನ್ನು ಈ ಶೀರ್ಷಿಕೆಗೆ ಜಮಾ ಮಾಡುವ ಮೂಲಕ ಬಿಲ್ಲನ್ನು ಪಾವತಿ ಮಾಡಬೇಕು. ವೇತನವನ್ನು ಬಟವಾಡೆ ಮಾಡಲು ನಿವ್ವಳ ಮೊತ್ತಕ್ಕೆ ಚೆಕ್ಕನ್ನು ಬಟವಾಡೆ ಅಧಿಕಾರಿಗೆ ಅವರು ನೀಡುವರು.

(ಈ) ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ 2018 ಗೆ ವೇತನ ಬಿಲ್ಲುಗಳಿಂದ ಕಟಾವು ಮಾಡಲಾದ ಮೊತ್ತವನ್ನು **"8658-00-102-4-32: State Government Employees Contribution towards Flood Relief (Kodagu and other districts)"** ಗೆ ಎಂಬ ಲೆಕ್ಕಶೀರ್ಷಿಕೆಗೆ ಖಜಾನೆಯು ಜಮಾ ಮಾಡುವುದು. ಅಮಾನತ್ತು ಲೆಕ್ಕ ಶೀರ್ಷಿಕೆಗೆ ಮಾಡುವ ಹೊಂದಾಣಿಕೆಯು, ಕರ್ನಾಟಕ ಖಜಾನೆ ಸಂಹಿತೆಯ ಅನುಚ್ಛೇದ 107 ಮತ್ತು ಇದೇ ಸಂಹಿತೆಯಲ್ಲಿ ನಿಗಧಿಪಡಿಸಿದ 13 ಮತ್ತು 14ನೇ ಸಂಖ್ಯೆಯ ನಮೂನೆಯ ಪ್ರಕಾರ ವರ್ಗಾವಣೆಯ ಮೂಲಕ ಮಾಡತಕ್ಕದ್ದು.

(ಉ) ರಾಜ್ಯ ಸರ್ಕಾರಿ ನೌಕರರ ವೇತನದಿಂದ ಕಟಾವು ಮಾಡಿ ಲೆಕ್ಕ ಶೀರ್ಷಿಕೆ **"8658-00-102-4-32: State Government Employees Contribution towards Flood Relief (Kodagu and other districts)"** ಗೆ ಜಮೆ ಮಾಡಲಾದ ಕ್ರೋಢೀಕೃತ ಮೊತ್ತವನ್ನು ಲೆಕ್ಕ ಶೀರ್ಷಿಕೆ **"8449-00-120-9-60: Flood Relief Fund (Kodagu and other districts)"** ಗೆ ವರ್ಗಾವಣೆ ಮೂಲಕ ಜಮೆ ಮಾಡತಕ್ಕದ್ದು. ಹೀಗೆ ಜಮೆ ಮಾಡಲಾದ ಮೊತ್ತವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಖಾತೆ ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ 2018, ವಿಧಾನ ಸೌಧ ಶಾಖೆಯ ಖಾತೆ ಸಂಖ್ಯೆ: **37887098605, IFSC Code:SBIN0040277, MICR No.560002419** ಗೆ ಚೆಕ್ ಮುಖಾಂತರ ಜಮೆ ಮಾಡುವುದು.

**Dr. S. O. Halasagi**
**I/c. PRINCIPAL,**
**Shivanand College,**
**Kagwad. Dist. Belagavi.**

Scanned by CamScanner

(ಊ) ಉಪಖಜಾನೆಗಳು ಮುರಿದುಕೊಂಡ ಮೊತ್ತದ ಬಗ್ಗೆ ಒಂದು ಪಟ್ಟಿಯನ್ನು ಜಿಲ್ಲಾ ಖಜಾನೆಗಳಿಗೆ ಕಳುಹಿಸುವುದು ಮತ್ತು ಜಿಲ್ಲಾ ಖಜಾನೆಗಳು ಅಮಾನತ್ತು ಲೆಕ್ಕಶೀರ್ಷಿಕೆ "8658-00-102-4-32: State Government Employees Contribution towards Flood Relief (Kodagu and other districts)" ಗೆ ಜಮೆ ಮಾಡಲಾದ ಕ್ರೋಢೀಕೃತ ಮೊತ್ತವನ್ನು ಲೆಕ್ಕ ಶೀರ್ಷಿಕೆ "8449-00-120-9-60: Flood Relief Fund (Kodagu and other districts)" ಗೆ ವರ್ಗಾವಣೆ ಮೂಲಕ ಜಮೆ ಮಾಡುವುದು. ಹೀಗೆ ಜಮೆ ಮಾಡಲಾದ ಕ್ರೋಢೀಕೃತ ಮೊತ್ತವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ), ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ 2018 ಖಾತೆಗೆ ಆನ್‌ಲೈನ್ ಮುಖಾಂತರ ವರ್ಗಾಯಿಸಲು ಅಥವಾ ಚೆಕ್ಕುಗಳ ಮೂಲಕ ಪಾವತಿಸಲು ಅವಶ್ಯಕ ಕ್ರಮಗಳನ್ನು ತೆಗೆದುಕೊಳ್ಳುವುದು. ಹೀಗೆ ಕೈಗೊಂಡ ಕ್ರಮದ ಮಾಹಿತಿಯನ್ನು ಮಾನ್ಯ ಮುಖ್ಯ ಮಂತ್ರಿಗಳ ಕಾರ್ಯದರ್ಶಿಯವರಿಗೆ ಕಳುಹಿಸುವುದು.

(ಋ) ನೌಕರರ ವೇತನವನ್ನು ಹೆಚ್‌ಆರ್‌ಎಂಎಸ್ ತಂತ್ರಾಂಶ ಪದ್ಧತಿಯ ಮೂಲಕ ಪಾವತಿಸದ ಪ್ರಕರಣಗಳಲ್ಲಿಯೂ ಸಹ ಈ ಮೇಲಿನ ವಿಧಾನವನ್ನೇ ಅನುಸರಿಸತಕ್ಕದ್ದು. ಇಂತಹ ಪ್ರಕರಣಗಳಲ್ಲಿ ಜಿಲ್ಲಾ ಖಜಾನೆಗಳು ಅಮಾನತ್ತು ಲೆಕ್ಕ ಶೀರ್ಷಿಕೆಗೆ ಖರ್ಚು ಹಾಕುವುದರ ಮೂಲಕ ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ 2018 ಖಾತೆಗೆ ಅಮಾನತ್ತು ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿದ ಮೊತ್ತಕ್ಕೆ ಒಂದು ಸಂಚಿತ ಚೆಕ್ಕನ್ನು ನೀಡುವುದು ಮತ್ತು ಆ ಚೆಕ್ಕುಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಖಾತೆ ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ 2018, ವಿಧಾನ ಸೌಧ ಶಾಖೆಯ ಖಾತೆ ಸಂಖ್ಯೆ 37887098605ಗೆ ಜಮಾ ಮಾಡಲು ಮುಖ್ಯಮಂತ್ರಿಗಳ ಕಾರ್ಯದರ್ಶಿಯವರಿಗೆ ಕಳುಹಿಸುವುದು.

(ಎ) 2018ರ ಸೆಪ್ಟಂಬರ್ ಮಾಹೆಯಲ್ಲಿ ಸ್ವೀಕರಿಸಲಾದ ವೇತನ ಬಿಲ್ಲುಗಳ ನಿರ್ವಹಣೆಗಳನ್ನು 2018ರ ಡಿಸೆಂಬರ್ 10ನೇ ದಿನಾಂಕದೊಳಗೆ ಪೂರೈಸಬೇಕು. 31-12-2018ರ ನಂತರ ಪಾವತಿ ಮಾಡಿದ ಬಿಲ್ಲುಗಳ ಪ್ರಕರಣಗಳಲ್ಲಿ ಅವುಗಳನ್ನು ಪಾವತಿ ಮಾಡಿದ ಒಂದು ವಾರದ ಒಳಗೆ ಮುಖ್ಯಮಂತ್ರಿಗಳ ಕಾರ್ಯದರ್ಶಿಯವರಿಗೆ ಚೆಕ್ಕುಗಳನ್ನು ಕಳುಹಿಸಬೇಕು. ಎಲ್ಲಾ ಜಿಲ್ಲಾ ಖಜಾನೆಗಳು ಮತ್ತು ಬೆಂಗಳೂರಿನ ರಾಜ್ಯ ಹುಜೂರ್ ಖಜಾನೆಯು ನೀಡಿದ ಚೆಕ್ಕುಗಳು/ಆನ್‌ಲೈನ್ ಪಾವತಿ ದಾಖಲೆಗಳ ಒಂದು ಪ್ರತಿಯನ್ನು ಮುಖ್ಯಮಂತ್ರಿಗಳ ಕಾರ್ಯದರ್ಶಿಯವರಿಗೆ ಜಮೆಗಳ ಲೆಕ್ಕ ಹೊಂದಾಣಿಕೆಯ ಉದ್ದೇಶಕ್ಕಾಗಿ ಕಳುಹಿಸಬೇಕು ಹಾಗೂ ಇದರ ಒಂದು ಪ್ರತಿಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು ಇವರಿಗೆ ಕಳುಹಿಸುವುದು.

(ಏ) ಬೆಂಗಳೂರಿನ ರಾಜ್ಯ ಹುಜೂರ್ ಖಜಾನೆಯಲ್ಲಿ ಸ್ವೀಕರಿಸಲ್ಪಡುವ ವೇತನ ಬಿಲ್ಲುಗಳ ಮೇಲೂ ಸಹ ಈ ಮೇಲಿನ ಕ್ರಮಗಳನ್ನು ಪಾಲಿಸುವುದು.

(ಐ) ಕರ್ನಾಟಕ ರಾಜ್ಯದ ಪ್ರಕೃತಿ ವಿಕೋಪಕ್ಕೆ ನೀಡಲ್ಪಡುವ ಸರ್ಕಾರಿ ನೌಕರರ ಒಂದು ದಿನದ ವೇತನ ದೇಣಿಗೆಯನ್ನು ಕಟಾವು ಮಾಡಿ ಈ ಮೇಲಿನ ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡಿ ಅದನ್ನು ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ 2018 ಖಾತೆಗೆ ಪಾವತಿಸುವ ಪ್ರಕ್ರಿಯೆಯ ಮೇಲುಸ್ತುವಾರಿಗಾಗಿ ಖಜಾನೆ ನಿರ್ದೇಶಕರು ನೇಮಿಸುವ ನೋಡಲ್ ಅಧಿಕಾರಿಯು ಈ ಪ್ರಕ್ರಿಯೆಯ ಸಂಪೂರ್ಣ ಮೇಲುಸ್ತುವಾರಿಯನ್ನು ನಿರ್ವಹಿಸತಕ್ಕದ್ದು. ಈ ಮೇಲಿನ ಯೋಜನೆಯ ಅನುಷ್ಠಾನದಲ್ಲಿ ತೊಡಕುಗಳುಂಟಾದಲ್ಲಿ

Dr. S. O. Halasagi
I/c ...
Shi... e,
Kagwad. Dist. Belagavi.

ಸಕ್ಷಮ ಪ್ರಾಧಿಕಾರಿಯೊಂದಿಗೆ ಸಮಾಲೋಚಿಸಿ ಅದನ್ನು ಸರಿಪಡಿಸುವ ಜವಾಬ್ದಾರಿಯನ್ನು ನೋಡಲ್ ಅಧಿಕಾರಿಯವರು ಹೊಂದಿರುತ್ತಾರೆ.

2. ಸೆಪ್ಟಂಬರ್-2018ರ ವೇತನ ಎಂದರೆ, ಸರ್ಕಾರಿ ನೌಕರನಿಗೆ ಪ್ರಸ್ತುತ ಸೆಪ್ಟಂಬರ್. 30 ರಂದು ಲಭ್ಯವಿರುವ ವೇತನ ಎಂದು ಪರಿಗಣಿಸತಕ್ಕದ್ದು. ಪರಂತು: ತದನಂತರದಲ್ಲಿ ಹೊರಡಿಸುವ ಯಾವುದೇ ಆದೇಶಗಳ ಪ್ರಕಾರ ಹೆಚ್ಚಳವಾಗುವ ವೇತನವನ್ನು ಪರಿಗಣಿಸತಕ್ಕದ್ದಲ್ಲ.

3. ಮಹಾಲೇಖಪಾಲರು ನೀಡಿದ ಅಧಿಕಾರ ಪತ್ರದ ಮೇಲೆ ತಮ್ಮ ವೇತನವನ್ನು ಖಜಾನೆಗಳಿಂದ ಪಡೆಯುವ ಅಧಿಕಾರಿಗಳೂ ಸಹ ಮೇಲಿನ ಕ್ರಮವನ್ನು ಪಾಲಿಸುವುದು.

4. ಐ.ಆರ್.ಎಲ್.ಎ. ಪದ್ಧತಿಗೆ ಒಳಪಡುವ ಅಧಿಕಾರಿಗಳ ಪ್ರಕರಣಗಳಲ್ಲಿ ವೇತನ ಚೆಕ್ಕುಗಳನ್ನು ನೀಡುವ ಪ್ರಾಧಿಕಾರಿಗಳು ಚೆಕ್ಕುಗಳನ್ನು ನೀಡುವ ಸಮಯದಲ್ಲಿ ಕೊಡುಗೆ ಅಂಶವನ್ನು ಮುರಿದುಕೊಳ್ಳುವುದು ಮತ್ತು ಮುರಿದುಕೊಂಡ ಅಂಶದ ಅವಶ್ಯಕ ಹೊಂದಾಣಿಕೆಯನ್ನು ಮಾಡುವುದು. ಹಾಗೂ ಈ ಬಗ್ಗೆ ಮಾಹಿತಿಯನ್ನು ಮುಖ್ಯ ಮಂತ್ರಿಗಳ ಕಾರ್ಯದರ್ಶಿ ಹಾಗೂ ಖಜಾನೆ ಅಧಿಕಾರಿಯವರು ನೇಮಿಸುವ ನೋಡಲ್ ಅಧಿಕಾರಿಗೆ ನೀಡುವುದು.

5. ಸ್ಥಳೀಯ ಸಂಸ್ಥೆಗಳು ಮತ್ತು ವಿಶ್ವ ವಿದ್ಯಾಲಯಗಳೂ ಸೇರಿದಂತೆ ಅನುದಾನ ಪಡೆಯುವ ಇತರ ಸಂಸ್ಥೆಗಳು ತಮ್ಮ ಅಧೀನದಲ್ಲಿ ಕೆಲಸ ಮಾಡುವ ನೌಕರರ ಸಂಬಂಧದಲ್ಲಿಯೂ ಸಹ ಈ ಮೇಲಿನ ರೀತಿಯ ಕ್ರಮವನ್ನು ಅನುಸರಿಸತಕ್ಕದ್ದು. ತಮ್ಮ ಕೊಡುಗೆಯನ್ನು ಸೂಚಿಸುವ ಚೆಕ್ಕುಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಖಾತೆ ಮುಖ್ಯ ಮಂತ್ರಿಯವರ ಪರಿಹಾರ ನಿಧಿ ಪ್ರಕೃತಿ ವಿಕೋಪ 2018, ವಿಧಾನ ಸೌಧ ಶಾಖೆಯ ಖಾತೆ ಸಂಖ್ಯೆ:37887098605ಗೆ ಜಮಾ ಮಾಡಲು ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಯವರಿಗೆ ಕಳುಹಿಸುವುದು.

6. ಈ ಆದೇಶದನ್ವಯ ಕಟಾವು ಮಾಡಿ ಪ್ರಕೃತಿ ವಿಕೋಪ ಪರಿಹಾರಕ್ಕಾಗಿ ಸಾರ್ವಜನಿಕ ವಂತಿಕೆ ನಿಧಿಗೆ ಸಂದಾಯವಾಗುವ ಮೊತ್ತವು ಆದಾಯ ತೆರಿಗೆಯ ಅಧಿನಿಯಮದ ಪ್ರಕರಣ 80(G) ಯಡಿ ಶೇಕಡ 100ರಷ್ಟು ಆದಾಯ ತೆರಿಗೆಯಿಂದ ವಿನಾಯಿತಿಗೆ ಒಳಪಡುತ್ತದೆಂದೂ. ಅದರಂತೆ, ಸರ್ಕಾರಿ ನೌಕರರು ಪ್ರಕೃತಿ ವಿಕೋಪ ಪರಿಹಾರಕ್ಕಾಗಿ ಸಾರ್ವಜನಿಕ ವಂತಿಕೆ ನಿಧಿಗೆ ಸಂದಾಯ ಮಾಡುವ ಮೊತ್ತಕ್ಕೆ ಶೇಕಡಾ 100ರಷ್ಟು ತೆರಿಗೆ ವಿನಾಯತಿಯನ್ನು ಪಡೆಯಲು ಅರ್ಹರಿರುತ್ತಾರೆಂದು ತಿಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಎಸ್.ಮೋಗೋಜಿ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-2).
BVR 17/9/18

ಗೆ:

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 25 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

ಇವರಿಗೆ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.

Dr. S. O. Halasagi
I/c. PRINCIPAL,
Shivanand College,
Kagwad. Dist. Belagavi.

Scanned by CamScanner

SMATrust's

**SHIVANAND COLLEGE, KAGWAD-591223**

**(Arts , Commerce , BBA and Science)**

Re- Accredited- 'B' Grade by NAAC

(Affiliated to Rani Channamma University, Belagavi)

## DEPARTMENT OF POLITICAL SCIENCE AND NSS
## JOINTLY ORGANISE
# "NATIONAL VOTERS' AND CONSTITUTION DAY CELEBRATION"

**Friday : 25-01-2019 Time : 11-30 AM. Place : BCom. III Hall**

**President : Dr. G. G. Karalatti**
Principal, Shivanand College, Kagwad

**Chief Guest : Dr.S.O.Halasagi**
Head of Department of Commerce

*********** ALL ARE CORDIALLY INVITED ************

| | | |
|---|---|---|
| Dr. S.A. Karki & Prof. I.S.Jamadar | Dr.S.P.Talawar | Dr. G. G. Karalatti |
| NSS Officers NSS Officers | HOD of Political Science HOD of Political Science | Principal |

Scanned by CamScanner

Scanned by CamScanner

SMA Trust's


# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ,ರಾಷ್ಟ್ರೀಯ ಹೆದ್ದಾರಿ -೦೪ , ಬೆಳಗಾವಿ - ೫೯೧೧೫೬

## RANI CHANNAMMA UNIVERSITY

Vidyasangama, National Highway-04, Belagavi - 591156

E-mail: elcrcub@gmail.com Website: www.rcub.ac.in


ಪ.ಸಂ.:ರಾ.ಚ.ವಿ.ವಿ / ಬೆಳಗಾವಿ / ELC/2019-20 / 3396 ದಿನಾಂಕ :11-11-2019

11 NOV 2019

ಇವರಿಗೆ,

ಪ್ರಾಂಶುಪಾಲರು

ಸಂಯೋಜಿತ ಮಹಾವಿದ್ಯಾಲಯಗಳು

ಬೆಳಗಾವಿ ಜಿಲ್ಲೆ ವ್ಯಾಪ್ತಿ.

**ವಿಷಯ :** ELC ಮತ್ತು VAF ಕ್ಲಬ್ ರಚಿಸಿದ ದಾಖಲಾತಿಗಳನ್ನು ಖುದ್ದಾಗಿ ಹಾಜರಾಗಿ ಪರಿಶೀಲನೆ ಮಾಡಿಕೊಳ್ಳುವ ಕುರಿತು.

ಉಲ್ಲೇಖ:ಸಿಆಸುಇ/೮೧/ಸ್ವೀಪ್/2019 ದಿನಾಂಕ:೦೮-೧೧ -೨೦೧೯.

ಮಾನ್ಯರೆ,

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖದನ್ವಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಬೆಳಗಾವಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಯೋಜಿತ ಮಹಾವಿದ್ಯಾಲಯಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ತಮ್ಮ ಮಹಾವಿದ್ಯಾಲಯಗಳಲ್ಲಿ ರಚಿಸಲಾದ ELC ಮತ್ತು VAF ಕ್ಲಬ್ ಗಳ ಕುರಿತು ದಿನಾಂಕ :14-11-2019ರ 11:00 ಘಂಟೆಗೆ ಕುವೆಂಪು ಸಭಾಂಗಣದಲ್ಲಿ ತರಭೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು ಸದರಿ ಸಭೆಗೆ ಪ್ರಾಂಶುಪಾಲರು ಮತ್ತು ELC ಮತ್ತು VAF ಕ್ಲಬ್ ಅಧಿಕಾರಿಗಳು ತಪ್ಪದೆ ಹಾಜರಿರಲು ಆದೇಶಿಸಲಾಗಿದೆ. ಮುಂದುವರೆದು ಸದರಿ ತರಭೇತಿಗೆ ಬರುವಾಗ ELC ಮತ್ತು VAF ಕ್ಲಬ್ ರಚನೆಯಾದ ಬಗ್ಗೆ ಹಾಗು ಕೈಗೊಳಲಾದ ಕಾರ್ಯಕ್ರಮಗಳ ಸಂಪೂರ್ಣ ಮಾಹಿತಿಯನ್ನು ಖುದ್ದಾಗಿ ವಿಶ್ವವಿದ್ಯಾಲಯಕ್ಕೆ ಪ್ರಾಂಶುಪಾಲರು ELC ಮತ್ತು VAF ಕ್ಲಬ್ ಅಧಿಕಾರಿಗಳು ಲಗತ್ತಿಸಿರುವ ನಮೂನೆಗಳ ಪ್ರಕಾರ ವಿಶ್ವವಿದ್ಯಾಲಯದ ELC ಮತ್ತು VAF ವಿಭಾಗಕ್ಕೆ ಸಲ್ಲಿಸಿ ಪರಿಶೀಲನೆ ಪಡಿಸಿಕೊಳಬೇಕೆಂದು ಈ ಮೂಲಕ ಆದೇಶಿಸಲಾಗಿದೆ. ಸದರಿ ಮಾಹಿತಿಯನ್ನು ಅಧ್ಯಕ್ಷರು, ಜಿಲ್ಲಾ ಸ್ವೀಪ್ ಸಮಿತಿ ಹಾಗು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಬೆಳಗಾವಿ ರವರಿಗೆ ಸಲ್ಲಿಸಲಾಗುವದು.

ಧನ್ಯವಾದಗಳು,

Dr. SPT

12.11.19

ಕುಲಸಚಿವರು

ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,

ಬೆಳಗಾವಿ

ಲಗತ್ತು:

1. ELC ರಚನೆ ಕುರಿತು ಸಲ್ಲಿಸಬೇಕಾದ ಮಾಹಿತಿ.
2. VAF ರಚನೆ ಕುರಿತು ಸಲ್ಲಿಸಬೇಕಾದ ಮಾಹಿತಿ.


Scanned by CamScanner



Scanned by CamScanner

Scanned by CamScanner